International Journal of Kannada Research 2016; 2(3): 11-13

International Journal of Kannada Research
www.kannadajournal.com

**ISSN: 2454–5813**
IJSR 2016; 2(3): 11-13
© 2016 IJKS
www.kannadajournal.com
Received: 03-05-2016
Accepted: 04-06-2016

**ಉಮೇಶ ಕ. ಪಾಟೀಲ.**
**ಸಂಶೋಧನ ವಿದ್ಯಾರ್ಥಿ, ಡಾ. ಆರ್. ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ ಧಾರವಾಡ.,**

**Correspondence**
**ರವಿಶಂಕರ ಜಿ. ಕೆ.**
**ಸಂಶೋಧನ ವಿದ್ಯಾರ್ಥಿ, ಡಾ. ಆರ್. ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ ಧಾರವಾಡ.,**

# ವಡ್ಡಾರಾಧನೆಯಲ್ಲಿ ಜನಜೀವನದ ಚಿತ್ರಣ

**ಉಮೇಶ ಕ. ಪಾಟೀಲ.**

ಪ್ರಾಚೀನ ಕನ್ನಡ ಸಾಹಿತ್ಯವು ಚಂಪುವೆಂಬ ಗದ್ಯ–ಪದ್ಯ ಸಮ್ಮಿಶ ಕಥನದಿಂದ ಆರಂಭವಾಯಿತ್ತು. ಕನ್ನಡ ಪ್ರಾಚೀನತೆ ಗುರುತಿಸುವಲ್ಲಿ ಮಹತ್ವದ ದಾಖಲೆಯಾಗಿ ನಿಲ್ಲುವ ಶಾಸನಗಳ ರಚನೆಯೂ ಗದ್ಯವೇ ಆಗಿದೆ. ಕಥೆ ಹೇಳುವ ಕಲೆಗಾರಿಕೆ ಬಹು ಕಾಲದಿಂದಲೂ ಜನರಲ್ಲಿ ಬೆಳೆದು ಬಂದ ಮನರಂಜನಾ ಕ್ರಮವಾಗಿದೆ. ಆದರಿಂದ ಕಾವ್ಯಕ್ಕಿಂತಲೂ ಕಥೆಗಳೇ ಪ್ರಥಮವಾಗಿ ಕಾಣುತ್ತವೆ. ಪ್ರಾಕೃತ, ಸಂಸ್ಕೃತ ಭಾಷೆಗಳಲ್ಲಿ ಕನ್ನಡ ಭಾಷೆಗಿಂತ ಬಹು ಹಿಂದೆಯೇ ನಡೆದಿರಬೇಕೆನಿಸುತ್ತದೆ. ಹರಿಸೇಣನ ಬೃಹತ ಕಥಾಕೋಶ, ಬಾಣನ ಕಾದಂಬರಿ ಗುಣ ಮತ್ತು ಕಲಾತ್ಮಕತೆಯಿಂದ ರಚನೆಯಾಗಿವೆ. ಹರಿಷೇಣ 'ಬೃಹತ ಕಥಾಕೋಶ' ಸಂಸ್ಕೃತದಲ್ಲಿ ಬೃಹದಾರಾಧನಾ ಆಗಿ ಕನ್ನಡದಲ್ಲಿ 'ಆರಾಧನಾ ಕರ್ನಾಟ ಟೀಕಾ'ಯಾಯಿತು. ಪ್ರಾಕೃತ ಮೂಲಗ್ರಂಥ 'ಆರಾಧನಾ' ಇದಕ್ಕೆ ಕನ್ನಡ ರೂಪ ಕೊಟ್ಟವನು ಬ್ರಾಜಿಷ್ಣು.

ವಡ್ಡಾರಾಧನೆಯನ್ನು ಓದುವಾಗ ಒಂದು ಸುಂದರ ಜೀವನ ಚಿತ್ರ ನಮ್ಮ ಕಣ್ಣೆದುರಿಗೆ ಮೂಡುತ್ತದೆ. ಅಲ್ಲಿ ಬಂದಿರುವ ವಿವರಣೆಗಳಿಂದ ಆಗಿನ ಕಾಲದ ಸಮಾಜ ಜೀವನದ ಒಂದು ಸ್ಪಷ್ಟಕಲ್ಪನೆ ನಮಗೆ ಕಂಡು ಬರುತ್ತದೆ. ಈ ಕೃತಿಯಲ್ಲಿ ಮೂಡಿರುವದು ಬಹುಮಟ್ಟಿಗೆ ಸಮಾಜದ ಉನ್ನತ ವರ್ಗದ ಜನಗಳ ಜೀವನ ಚಿತ್ರ. ಸಮಾಜದ ಕೆಳವರ್ಗದ ಜನಗಳ ಜೀವನ ವಿಚಾರ ಅಲ್ಪಸ್ವಲ್ಪ ಮಾತ್ರ ಕಂಡು ಬರುತ್ತವೆ. ಈ ಕಥೆಗಳಲ್ಲಿ ದೀಕ್ಷೆತೆಗೆದುಕೊಂಡು ಜಿನಮುನಿಗಳಾಗಿ ಮೋಕ್ಷಗಾಮಿಗಳಾಗಿರುವವರು ರಾಜರ ಅರಮನೆಯಲ್ಲಿ, ಇಲ್ಲವೆ ಪರದರಮನೆಯಲ್ಲಿ ಒಟ್ಟಿನಲ್ಲಿ ಸಮಾಜದ ಉತ್ತಮ ವರ್ಗದ ಜನಗಳ ಮನೆಯಲ್ಲಿ ಜನಿಸಿದವರು. "ಭದ್ರಬಾಹುಭಟಾರರ ಕಥೆ" "ಗುರುದತ್ತಭಟಾರರ ಕಥೆ" ಮೊದಲಾದ ಕೆಲವು ಕಥೆಗಳಿಲ್ಲಿ ಮಾತ್ರ ಈ ಸಾಧಕರು ಮೊದಲು ಸಾಮಾನ್ಯರ ಮನೆಯಲ್ಲಿ ಹುಟ್ಟಿ ಆಮೇಲೆ ಮೇಲೇರುತ್ತ ಹೋದದ್ದು ಕಂಡು ಬರುತ್ತದೆ. ವಡ್ಡಾರಾಧನೆಯಲ್ಲಿ ಸಾಮಾನ್ಯ ಜನರ ಜೀವನದ ವಿಚಾರ ಬರಲು ಕಾರಣವುಂಟು. ಜೈನ ಮುನಿಗಳು ಸಾಮಾನ್ಯ ಜನತೆಯೊಡನೆ ನಿಕಟ ಸಂಪರ್ಕ ಹೊಂದಿರುತ್ತಾರೆ. ಸುಳಿದಾಡುವುದೆಲ್ಲ ಜನಸಾಮಾನ್ಯರ ಮಧ್ಯೆ. ಅವರು ಉಪದೇಶ ಮಾಡುವುದು ಜನಸಾಮಾನ್ಯರಿಗೆ. ಅವರು ತಿದ್ದಲು ಬಯಸಿದ್ದು ಸಾಮಾನ್ಯ ಜನತೆಯನ್ನು. ಅಲ್ಲದೆ ಋಷಿಗಳು ತಮ್ಮ ಪೂರ್ವಭವಗಳಲ್ಲಿ, ಪೂರ್ವಾಶ್ರಮಗಳಲ್ಲಿ ಜನಸಾಮಾನ್ಯರ ಸಂಪರ್ಕವನ್ನು ಬೇಕಾದಷ್ಟು ಇಟ್ಟುಕೊಂಡಿದ್ದರು. ಕೆಲವರಂತೂ ಅವರ ನಡುವೇ ಹುಟ್ಟಿ ಬೆಳೆಯುತ್ತಾರೆ. ಹೀಗಾಗಿ ವಡ್ಡಾರಾಧನೆಯಲ್ಲಿ ಸಾಮಾನ್ಯ ಜನರ ಜೀವನದ ವಿಚಾರ ಬಂದಿದೆ. "ಗುರುದತ್ತಭಟಾರರ ಕಥೆ"ಯಲ್ಲಿ ಗದ್ದೆ ಉಳುವ ವಿಚಾರ ಅದರಲ್ಲಿಯೂ ಬ್ರಾಹ್ಮಣರು ಗದ್ದೆ ಉಳುತ್ತಿದ್ದುದಾಗಿ ತಿಳಿದು ಬರುತ್ತದೆ. ಮತ್ತು ಹಳ್ಳಿಯ ಕೃಷಿಕ ಜೀವನದ ಒಂದು ಉತ್ತಮ ಚಿತ್ರನವಿದೆ. "ಹಳಮುಖನೆಂಬ ಪಾರ್ವ ತನ್ನ ಮೂಡಣ ಕೆಯ್ಯನುಳಲೆಂದು ಪೋಗಿ ಕೆಸರಾದುದಂ ಕಂಡು ಉಳಲ್ ಪದನಲ್ತೆಂದು ಬೆಟ್ಟದ ಪಡುವಣ ಕೆಯ್ಯನುಳಲ್ ಪೋಗುತ್ತುಂ..."[1] ಮಳೆ ಬರುತ್ತಿದ್ದಂತೆಯೇ ರೈತರು ಹೊಲ ಉಳಲು ಹೊಲಕ್ಕೆ ಹೋಗುವದು; ಹದ ನೋಡಿ ಉಳುವುದು; ಹೆಂಡತಿಬುತ್ತಿ ತರುವದು; ಹಸಿದ ಗಂಡನ ಕೋಪ; ಮನೆಗೆ ಹೋಗಿ ಹೆಂಡತಿ ಕೋಪದಿಂದ

1. ಟಿ.ಕೇಶವ ಭಟ್ಟ ವಡ್ಡಾರಾಧನೆ ಗದ್ಯಾನುವಾದ ಪುಟ ಸಂಖ್ಯೆ–258

ಹೊಡೆಯುವದು; ಸಾಮಾನ್ಯ ರೈತನ ಹುಂಬತನ ಇವೇ ಮೊದಲಾದ ವಿಚಾರಗಳು ತುಂಬಾ ನೈಜವಾಗಿ ಚಿತ್ರಿತವಾಗಿವೆ. ಸಾವಿರಾರು ವರ್ಷಗಳ ಹಿಂದಿನ ರೈತರ ಹಾಗೂ ಹಳ್ಳಿಯ ಜನ ಜೀವನದ ಭ್ರಾಜಿಷ್ಣು ಚನ್ನಾಗಿ ಕನ್ನಡಿ ಹಿಡಿದಿದ್ದಾನೆ. ಹಾಗೆ ಬೇಡರ ಜೀವನ ಒಂದು ಸೂಕ್ಷ್ಮಚಿತ್ರ "ಗುರುದತ್ತಭಟಾರರಕಥೆ" ಯಲ್ಲಿ ದೊರಕುತ್ತದೆ. ವ್ಯವಸಾಯ ಕ್ಷೇತ್ರಕ್ಕೆ ಸಂಬಂಧಪಟ್ಟ ಕುಮ್ಮರಿ "ಕುಮ್ಮರಿಯಂ ಸುಡಲೆಂದು ಕಡಿದೊಟ್ಟದ ಮರಂಗಳ್" ಕಾಡನ್ನು ಕಡಿದು ಸಾಗುವಳಿ ಮಾಡುವ ಪ್ರದೇಶ ಇದು ಇಂದಿನ ಅರಣ್ಯ ಭೂಮಿಯನ್ನು ಆಕ್ರಮನವನ್ನು ನೆನಪಿಗೆ ತರುತ್ತದೆ, ಈ ಸುಡುವ ವಿಚಾರ "ಗುರುದತ್ತ ಭಟಾರರ ಕಥೆ"ಯಲ್ಲಿ ನಿರೂಪಿತವಾಗಿದೆ. ಹಳ್ಳಿಯ ಜೀವನ ಇನ್ನೊಂದು ವಿಶೇಷಚಿತ್ರ "ವೃಷಭಸೇನ ಭಟಾರರ ಕಥೆ"ಯದು ಇಲ್ಲಿ ಊರ ಬಾವಿಯ ಬಳಿಯಲ್ಲಿ ಅರಸನು ನೀರು ಕೇಳುವ, ಅವನಿಗೆ ಜಿನದತೆ ನೀರು ಹುಯ್ಯುವ ಚಿತ್ರ ತುಂಬ ಜೀವಂತವಾಗಿದೆ, ಸಹಜಸುಂದರವಾಗಿದೆ. ಈಗಲೂ ಇಂತಹ ದೃಶ್ಯಗಳನ್ನು ಹಳ್ಳಿಯ ಕಡೆ ಕಾಣಬಹುದು ವಡ್ಡಾರಾಧನೆಯಲ್ಲಿ ಸುಮಾರು ಮೂರು ಸಂದರ್ಭಗಳಲ್ಲಿ ಗಂಡ–ಹೆಂಡತಿಯರು ಅಲ್ಪಕಾರಣಕ್ಕಾಗಿ ಹೊಡೆದಾಡಿ, ಕ್ರೂರವಾಗಿ ನಡೆದುಕೊಳ್ಳುತ್ತಾರೆ. ಅದನ್ನು ನೋಡಿದರೆ ವಡ್ಡಾರಾಧನೆಯ ಕಾಲಕ್ಕಾಗಲೆ ಸಮಾಜದಲ್ಲಿ ಸ್ತ್ರೀಯ ಸ್ಥಾನಮಾನ ತೀರಾ ಕೆಳಮಟ್ಟಿಗೆ ಇಳಿದ್ದಿದು ಕಂಡು ಬರುತ್ತದೆ. ಹಾಗೆ ಪುರುಷರ ಕೈಮೇಲಾಗಿ ಇದ್ದದು ಗೊತ್ತಾಗುತ್ತದೆ. ಇದು ಆಧುನಿಕ ಸಮಾಜದ ಪುರುಷ ಪ್ರಧಾನ ಕುಟುಂಬಕ್ಕೆ ಕನ್ನಡಿ ಹಿಡಿಯುತ್ತದೆ. "ಚಾಣಾಕ್ಯರಿಸಿಯ ಕಥೆ" ಯಲ್ಲಿ ಒಬ್ಬ ಹೂವಾಡಿಗನ ವಿಚಾರ ಬರುತ್ತದೆ. ಕಥೆಗೆ ಸಂಬಂಧಪಟ್ಟ ಯೂವುದೊ ಒಂದು ಗುಟ್ಟನ್ನು ತಿಳಿಸಲು ಈ ಪ್ರತ್ರ ಬರುತ್ತದೆಯೆ ಹೊರತು, ಹೂ ಮಾರುವವರ ಜೀವನದ ಯಾವ ಹೆಚ್ಚಿನ ವಿಚಾರವನ್ನಾಗಲಿ ವಿವರಗಳು ತಿಳಿದು ಬರುವದಿಲ್ಲಾ. ಒಬ್ಬ ಕಡು ಲೋಭಿಯ ವಿಚಾರ "ದಂಡಕರಿಸಿಯ ಕಥೆ"ಯಲ್ಲಿದೆ. ಹಾಗೆಯೇ ಧನಿಕರ ಮನೆಗೆಕೆಲಸ ಮಾಡಲು ಹೋಗುತ್ತಿದ್ದ ಬಡ ಹೆಂಗಸರನ್ನು ಅವರು ಹೇಗೆ ಹೀನಾಯವಾಗಿ ನಡೆಸಿಕೊಳ್ಳುತ್ತಿದ್ದರು ಎಂಬ ವಿಚಾರವೂ ತಿಳಿದು ಬರುತ್ತದೆ. ಒಂದು ಸೊಗಸಾದ ಸಾಮಾಜಿಕ ಪದ್ಧತಿಯ ವಿಚಾರ "ಚಾಣಾಕ್ಯರಿಸಿಯ ಕಥೆ"ಯಲ್ಲಿ ಪ್ರಸ್ತಾಪಿತವಾಗಿದೆ. ಅದೇ ಚೋಳಂಗ, ಎಂದರೆ ರವಿಕೆ ಶಾಸ್ತ್ರ.ಅದರ ಹೆಚ್ಚು ವಿವರಗಳೇನು ಇಲ್ಲಿ. ಆದರೆ ಅಂತಹ ಸಂತೋಷ ಸಮಾರಂಭಗಳಲ್ಲಿ ನಂಟರಿಷ್ಟರನ್ನು ಆಹ್ವಾನಿಸಿಪಚಾರ ಮಾಡಿಸುವದು ಆಗಿನ ಕಾಲದಲ್ಲೂ ಇತ್ತು. ಧನಿಕನಿಗೆ ಹೆಚ್ಚು ಮರ್ಯಾದೆ ಕೊಟ್ಟ ಬಡವರನ್ನು ಕಡೆಗಣಿಸುವವರು ಯಾವಾಗಲೂ ಇದ್ದರೂ. ವಡ್ಡಾರಾಧನೆಯಲ್ಲಿ ಎರಡು ಕಥೆಗಳಲ್ಲಿ ಗರ್ಭಿಣಿಯರಿಗೆ ಉಂಟಾಗುವ ವಿಚಿತ್ರ ಬಯಕೆಗಳು ಪ್ರಸ್ತಾಪ ಬೋದಿವೆ. "ಗುರುದತ್ತಭಟಾರರ ಕಥೆ"ಯಲ್ಲಿ ಜಂಬೂದ್ವೀಪದ ಭರತಕ್ಷೇತ್ರದಲ್ಲಿ ಮಗದೆ ಎಂಬ ನಾಡಿನ ರಾಜಗೃಹವನ್ನು ಶ್ರೇಣಿಕ ಮಹಾರಾಜನು ಆಳ್ವಿಕೆ ಮಾಡುತ್ತಿದ್ದನು ಅವನಿಗೆ ಎಂಟು ಮಂದಿ ಮಹಾರಾಣಿಯರು ಅವರಲ್ಲಿ ಧನಶ್ರೀ ಎಂಬ ರಾಣಿಗೆ ಜೀವನು ಹುಟ್ಟಿದನು. ಬಸುರಿನ ಸಮಯದಲ್ಲಿ ಎಲ್ಲ ಸ್ತ್ರೀಯರ ಹಾಗೆ ಧನಶ್ರೀಗೆ ಈ ರೀತಿ ಬಯಕೆಯಾದವು; "ಮಳೆಗಾಲದೊಳ್ ಆನೆಯನ್ನೇರಿ ಎಲ್ಲ ಪಡೆಯೊಡನೆ ಅಡವಿಗೆ ಪೋಗೆ ಆಲದ ಮರದ ಪಣ್ಣಳಂ ಕೊಯ್ವಂತಪ್ಪ ಮತ್ತೆ ಬಯ್ಗಿರುಳಿನ ಮನೋಹರಿಯೆಂಬ ಜಾವದಾಗಳ್ ಬಿಳಿದಪ್ಪ ಕಾಡಾನೆಯಂ ಕಾಣ್ಬದುಂ ಇಂತೀ ಬಯಕೆಯುಂ ಕನಸುಮನ್ ಅರಸಂಗೆ ಪೇೞ್ದೊಡರಸಂ ಕಾಲಮಲ್ಲದ ಕಾಲದೊಳ್ ಮೞೆಗಾಲಮನೆಂತು ಪಡೆಯಲಕ್ಕುಂ ಆ ಬಯಕೆಯಂ ತೀರ್ಚುವುದರಿದೆಂದು"[2] ಮಳೆಗಾಲದಲ್ಲಿ ಆನೆಯನ್ನು ಹತ್ತಿಕೊಂಡು ಕಾಡಿಗೆ ಹೋಗಿ ಆಲದ ಹಣ್ಣನ್ನು ಕಿತ್ತು ತಿನ್ನಬೇಕು ಮತ್ತು ಬೆಳಗಿನ ಮನೋಹರಿ ಎಂಬ ಜಾವದಲ್ಲಿ ಬಿಳಿಯ ಕಾಡಾನೆಯನ್ನು ನೋಡಬೇಕು ಎಂಬ ಬಯಕೆಗಳುಂಟುದುವು. ಆ ಬಯಕೆಯನು ಶ್ರೇಣಿಕರಾಜನ ಮಗನಾದ ಅಭಯಕುಮಾರನು ಆ ಬಯಕೆಯನ್ನು ಉಪಾಯದಿಂದ ನೆರವೇರಿಸುತ್ತಾನೆ.

ಚಾಣಾಕ್ಯರಿಸಿಯ ಕಥೆ ಯಲ್ಲಿ ಮಯೂರ ವಂಶದ ದೊರೆ ಕುಮುದನೆಂಬುವನ ರಾಣಿ ಗರ್ಭಿಣಿಯಾಗುತ್ತಿದ್ದಂತೆಯೇ ಅವಳಿಗೆ ಚಂದ್ರನನ್ನು ನುಂಗಬೇಕೆಂಬ ಬಯಕೆಯುಂಟಾಗುತ್ತದೆ. ಆಗ ಚಾಣಾಕ್ಯನು ಉಪಾಯದಿಂದ " ನೃಪತಿ ಪ್ರಾಸಾದದ ಶಿಖರದ ಮಧ್ಯ ಪ್ರದೇಶಮಂ ಬಾದಣದಂತಿರೆ ಛಿದ್ರಂ ಮಾಡಿ ಚಂದ್ರನಿರುಳ್ ಮಧ್ಯಾಹ್ನಮಪ್ಪ ಪೊೞ್ತಿಱಿಕೊಳಾ ಛಿದ್ರಕ್ಕಭಿಮುಖ ಮಾಗೆ ಪಿರಿದೊಂದು ಕಾಜಿನ ಬಟ್ಟಲೊಳ್ ಕಮ್ಮಿತಪ್ಪ ನೀರಂ ತೀವಿ ಚಂದ್ರಬಿಂಬಮಂ ನೀರೊಳ್ ಕಾಣ್ಬಂತಿರೆ ಮಾಡಿ ಅರಸಿಯಂ ತೃಷ್ಣಾಭಿವೃದ್ಧಿ ಯಪ್ಪ್ ಆಹಾರ ಮನೂಡಿ ನೀರಡಿಸಿದೊಡೆ ಚಾಣಕ್ಯನಿಂತೆಂದಂ ಮಂತ್ರದಿಂದ್ ಆಹ್ವಾನಂಗೆಯ್ದು ತಂದೆ....ಚಂದ್ರನಂ ನುಂಗೆಂದು ತೋಱಿದೊಡಾಕೆಯುಂ ಕಂಡು ರಾಗಿಸಿಯಾ ನೀರಂ ಕುಡಿದು"[3] ಹೀಗೆ ಬಯಕೆಯನ್ನು ಈಡೇರಿಸಿಕೊಂಡಳು. ಮುಸ್ಲಿಂ ಸಂಪ್ರದಾಯದಲ್ಲಿ ನೀರು ತುಂಬಿದ ಪಾತ್ರೆಯಲ್ಲಿ ಚಂದ್ರನನ್ನು ಪ್ರತಿ ಬಿಂಬಿಸಿ ಕಣ್ಣುಮುಚ್ಚಿ ಕುಡಿಯುವಪದ್ಧತಿಯಿದೆ.

ಹೆಂಗಸು ನೀರಿಗೆ ಹೋದಾಗ ಬಾವಿ, ಕೆರೆಗೆ, ನದಿಗೆ ಹೋಗುವಾಗ ಬರುವಾಗ ತಮಗೆ ಬೇಕಾದ ಮತ್ತು ಬೇಡವಾದ ಮಾತನಾಡುತ್ತಾರೆ, ಆದೇ ರೀತಿಯಾಗಿ " ಸುಕೌಶಲ್ಯಸ್ವಾಮಿಯ ಕಥೆ"ಯಲ್ಲಿ ಇಂತಹ ಒಂದು ಪ್ರಸಂಗ ಬರುತ್ತದೆ. ಸಿದ್ಧಾರ್ಥಸೆಟ್ಟಿಯ ಹಿರಿಯ ಹೆಂಡತಿ ಜಯಾವತಿ ನೆಲಮಾಳಿಗೆಯಲ್ಲಿ ಗೋಪ್ಯವಾಗಿ ಒಂದು ಗಂಡು ಮಗುವುಗೆ ಜನ್ಮನೀಡಿರುತ್ತಾಳೆ. ಅವಳ ಕೆಲಸದ ಸೇವಕಿ ಕುಂದಬೆ ನದಿಯ ನೀರಿಗೆ ಹೋಗಿದ್ದಾಗ ಗೆಳತಿ ನಾಗಬ್ಬೆ ಸಿಗುತ್ತಾಳೆ. ಅವಳು ಇಕೆಯ ಜೊತೆಗೆ ಮಾತಾಡುತ್ತಾ ಇಷ್ಟು ದಿವಸ ಕಾಣದೆ ಇದ್ದುದಕ್ಕೆಕಾರಣವನ್ನು ಕೇಳುತ್ತಾಳೆ. ಕುಂದಬೆ ಯಾರಿಗೆ ಹೇಳಬೇಡಾ ಎಂದು ಹೇಳಿ ಭಾಷೆ ತೆಗೆದುಕೊಂಡು ಎಲ್ಲವನ್ನು ಹೇಳುತ್ತಾಳೆ. ಆದರೆ ಹೆಂಗಸರ ಬಾಯಿಯಲ್ಲಿ ಮಾತು ನೀಲ್ಲುವದಿಲ್ಲ ಅದು ಊರಿಗೆ ತಿಳಿಯುವ ಹಾಗೆ ಯಾಗುತ್ತದೆ.

ಹೆಂಡತಿಯ ಮನಸ್ಸನ್ನು ಗಂಡ ಪರೀಕ್ಷಿಸುವ ಒಂದು ವಿನೋದ ಚಿತ್ರ "ಸುಕುಮಾರ ಸ್ವಾಮಿಯ ಕಥೆಯಲ್ಲಿ" ಬರುತ್ತದೆ. ಈ ವಿಚಾರ ನಾಗಶ್ರೀಗೆ ಅವರ ತಂದೆ ಸೋಮಶರ್ಮ ಹೇಳಿದ ಕಥೆಯಲ್ಲಿ ಬರುತ್ತದೆ. ವೈನಾಕನೆಂಬ ರೈತ ಕಬ್ಬಿನ ಗದ್ದೆಯನ್ನು ಉಳುವಾಗ ನಿಧಿಯನ್ನು ಕಾಣುತ್ತಾನೆ. ಆ ನಿಧಿಯನ್ನು ಜನರಿಂದ ಮರೆಮಾಚಿ ತೆಗೆದುಕೊಂಡು ಹೋಗಲು ಅಪೇಕ್ಷಿಸಿ ಅದಕ್ಕೆ ತನ್ನ ಹೆಂಡತಿಯ ಮನಸ್ಸನ್ನು ಪರೀಕ್ಷಿಸಬಯಸುತ್ತಾನೆ. ಅವನು ಕೃತಕ ಗರ್ಭಧರಿಸಿದವನಂತೆ ನಟಿಸುತ್ತಾನೆ. ಹೆಂಡತಿ ಕೇಳಲು "ಯಾರಿಗೂ ಹೇಳಬೇಡ. ಗಂಡಸರಿಗೆ ಆಗಬಾರದ್ದು ನನಗಾಗಿದೆ." ಎಂದು ಹೇಳುತ್ತಾನೆ ಅವಳು ಅದನ್ನು ಸಹಿಸಿಕೊಳ್ಳದೆ ಜೋರಾದ ಅತ್ತು ಅಕ್ಕ ಪಕ್ಕದ ಹೊಲ ಗದ್ದೆಗಳಲ್ಲಿ ಕೆಲಸ ಮಾಡುತ್ತಿದ್ದ ಜನಗಳನ್ನೆಲ್ಲಕೂಗಿಕರೆದು ಅದನ್ನು ತಿಳಿಸುತ್ತಾಳೆ. ಇದೊಂದು ಹಾಸ್ಯಮಯ ಸನ್ನಿವೇಶ. ಹೆಂಗಸರ ಬಾಯಲ್ಲಿ ಗುಟ್ಟು ನಿಲ್ಲುವುದಲ್ಲ ಎಂಬುವದನ್ನು ಸೂಚಿಸು ಕಥೆಯಿದು.

ಭಾರತೀಯ ಜಲ್ವಂತ ಸಮಸ್ಯೆಗಳಲ್ಲಿ ಒಂದಾದ ಬಾಲ್ಯವಿವಾಹ. ಸಾವಿರಾರೂ ವರ್ಷಗಳ ಹಿಂದೆ ನಮ್ಮಲ್ಲಿ ಒಂದು ವಿಚಿತ್ರ ಇದ್ದುದೇನೂ ಕಾಣುತ್ತವೆ. ಇಂದಿನಕ್ಕಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ ಮಗು ಹುಟ್ಟುವುದಕ್ಕೆ ಮುಂಚೆಯೇ, ಗರ್ಭದಲ್ಲಿದಾಗಲೇ, ಅದನ್ನು ಇಂತವರಿಗೆ ಕೊಟ್ಟು ಮದುವೆ ಮಾಡುತ್ತೇವೇಂದು ತೀರ್ಮಾಣ ಮಾಡುವ ಜನ ಹಿಂದಿದ್ದುದು ವಿಚಿತ್ರ. ಇದು ಸುಕುಮಾರ ಸ್ವಾಮಿಯ ಕಥೆಯಲ್ಲಿ ನಾಗಶ್ರೀ ಕೇಳಿದ ಕಥೆಗಳಲ್ಲಿ ಇಂಥ ಸಂಗತಿ ಬರುತ್ತದೆ

ವಿದ್ಯುಚ್ಚೋರನ ಕಥೆಯಲ್ಲಿ ಅಂದಿನ ಕಾಲದ ವೇಶಾವಾಟಿಯ ಚಿತ್ರಣವು ಬಂದಿದೆ. ವೇಶ್ಯೆಯರ ಮನೆಗೆ ಹೋಗುವಾಗ ವಿಟರು ಹೇಗೆ ಸಿಂಗರಿಸಿಕೊಂಡು ಹೋಗುತ್ತಿದ್ದರೆಂಬುವುದು ಈ ಕಥೆಯಲ್ಲಿ ಬರುತ್ತದೆ. "ವಿದ್ಯುಚ್ಚೋರನೆಂಬುವನು ಹೂವು ಮುಡಿದು ಕರ್ಪೂರ ಮಿಶ್ರಿತ ತಾಂಬೂಲ ಮೆಲ್ಲುತ್ತಾ ಊರಿನ ಸೂಳೆಗೇರಿಗಳಲ್ಲಿ ಅಡ್ಡಾಡುತ್ತಾ ತನಗೆ ಇಷ್ಟವಾದ ಸುಂದರ ಹೆಣ್ಣುಗಳಿಗೆ ಅವರು ಬೇಡಿದಷ್ಟು ಚಿನ್ನಾಭರಣಗಳನ್ನು ಕೊಟ್ಟು ಅವರೊಡನೆ ಸುಖಿಸುತ್ತಿದ್ದನೆಂದು ಹೇಳಲಾಗಿದೆ."[4]

2. ಡಿ.ಎಲ್.ನರಸಿಂಹಚಾರ್,ವಡ್ಡಾರಾಧನೆ, ಪುಟ ಸಂಖ್ಯೆ–201
3. ಡಿ.ಎಲ್.ನರಸಿಂಹಚಾರ್, ಸಂ. ವಡ್ಡಾರಾಧನೆ. ಪುಟ ಸಂಖ್ಯೆ–230
4. ಡಿ.ಎಲ್. ನರಸಿಂಹಚಾರ್–ಸಂ. ವಡ್ಡಾರಾಧನೆ ಪುಟ ಸಂಖ್ಯೆ–167

ಮಕ್ಕಳಿಲ್ಲಿದವರು ನಾಗದೇವತೆಗಳಿಗೆ ಪೂಜೆ ಸಲ್ಲಿಸಿದರೆ ಮಕ್ಕಳಾಗುತ್ತದೆ ಎಂಬ

ನಂಬಿಕೆ ಈಗಲೂ ನಮ್ಮಲ್ಲಂಟು. ಸುಕುಮಾರ ಸ್ವಾಮಿಯ ಕಥೆಯಲ್ಲಿ ಇಂಥ ನಂಬಿಕೆಯೊಂದರ ಪ್ರಸ್ತಾಪ ಬರುತ್ತದೆ. ಕನಸನ್ನು ನನಸೆಂದು ನಂಬುವುದದು ಮೂರ್ಖ ತನವೆಂಬಂತೆ ತೋರಿದರೂ ಕನಸುಗಳು ಭವಿಷ್ಯ ಜೀವನದ ಘಟನೆಗಳ ಮುನ್ಸೂಚನೆ ಕೊಡುತ್ತದೆ ಎಂಬುವದನ್ನು ಬಹು ಜನ ನಂಬುತ್ತಾರೆ. ಕನಸಿನಲ್ಲಿ ಕಂಡ ಸುಖ ದು:ಖಗಳಿಂದ ಪ್ರಭಾವಿತರಾಗುತ್ತಾರೆ. ‘‘ಭದ್ರಬಾಹುಭಟಾರರ ಕಥೆ’’ ಮತ್ತು ‘‘ಸನತ್ಕುಮಾರ ಚಕ್ರವರ್ತಿಯ ಕಥೆ’’ಗಳಲ್ಲಿಕನಸಿನ ಚಿಚಾರ ಬರುತ್ತದೆ. ಮುಂದೆ ಆ ಕನಸುಗಳು ನಿಜವಾಗಿ ಪರಿಣಮಿಸುತ್ತವೆ.

ಜ್ಯೋತಿಷ ಹಾಗೂ ಶುಭಾಶುಭನಿಮಿತ್ತಗಳಲ್ಲಿ ನಂಬಿಕೆ ಹಿಂದಿನವರಲ್ಲಿ ವಿಶೇಷವಾಗಿತ್ತು. ವಡ್ಡಾರಾಧನೆ ಕಥೆಗಳಲ್ಲಿ ಅಲ್ಲಲ್ಲಿ ಇದಕ್ಕೆ ಉದಾಹರಣೆಗಳನ್ನು ಕಾಣುತ್ತೆವೆ. ನಮಗೆ ಏನಾದರೂ ತೊಂದರೆಗಳಾಗ, ಕಳೆದುಕೊಂಡಾಗ ಜ್ಯೋತಿಸರನ್ನು ಕೇಳಿ ತಿಳಿದು ಕೊಳ್ಳುತ್ತಿದ್ದರು. ಸುಕುಮಾರಸ್ವಾಮಿರ ಕಥೆಯಲ್ಲಿ ಸೂರ್ಯಮಿತ್ರನು ದೊರೆ ಎರವಲು ಕೊಟ್ಟದ್ದ ಉಂಗುರವನ್ನು ಕಳೆದುಕೊಂಡು ಸುಧಮಾಚಾರ್ಯರನ್ನು ಕೇಳಿ ತಿಳಿದು ಕೊಳ್ಳುತ್ತಾನೆ. ಋಷಿಗಳು ಮಾತ್ರವಲ್ಲ, ಬೇರೆ ಜ್ಯೋತಿಷ್ಯ ಬಲ್ಲವರೂ ಇದ್ದು ಅವರೂ ಭವಿಷ್ಯವನ್ನು ಹೇಳುತ್ತಿದ್ದರು. ಸುಕುಮಾರಸ್ವಾಮಿಯ ಕಥೆಯಲ್ಲಿ ಒಬ್ಬ ಜೋಯಿಸನು ಸುಕುಮಾಸಸ್ವಾಮಿ ಯಾವಾಗ ಸಂನ್ಯಾಸಿಗಳ ಮುಖ ನೋಡುತ್ತಾನೊ ಆಗ ತಪಸ್ಸಿಗೆ ಹೋಗುತ್ತಾನೆ ಎಂದು ಭವಿಷ್ಯ ಹೇಳಿರುತ್ತಾನೆ. ಸುಕೌಶಲ್ಯಸ್ವಾಮಿಯ ಕಥೆಯಲ್ಲಿ ವಿಜಯಭಟಾರರು ಜಯಾವತಿಗೆ ಮಗನ ಮುಖವನ್ನು ನೋಡಿದಾಗ ತಂದೆಯೂ ಋಷಿಯಾಗಿರುವ ತಂದೆಯ ಮುಖವನ್ನು ನೋಡಿದಾಗ ಮಗನೂ ತಪಸ್ಸಿನಲ್ಲಿ ತೊಡಗುತ್ತಾರೆ ಎಂದು ಭವಿಷ್ಯ ನುಡಿಯುತ್ತಾರೆ. ಅದನ್ನು ತಪ್ಪಿಸಲು ಸುಕುಮಾರನ ಮತ್ತು ಸುಕೌಶಲನ ತಾಯಂದಿರು ಅಪಾರ ಎಚ್ಚರ ವಹಿಸಿ ವಿಶೇಷ ವ್ಯವಸ್ಥೆ ಮಾಡುತ್ತಾರೆ. ಆದರೆ ಭವಿಷ್ಯವನ್ನು ಸುಳ್ಳಾಗಿಸಲು ಆರ್ಥಯವಾಗುವುದಿಲ್ಲ. ಸನತ್ಕುಮಾರ ಚಕ್ರವತಿಯ ಕಥೆಯಲ್ಲಿ ದೂರೆ ಚಂದ್ರವೇಗನು ದೇವಗುವೆಂಬ ಜೋಯಿಸನಿಗೆ ತನ್ನ ನೂರು ಜನ ಹೆಣ್ಣುಮಕ್ಕಳನ್ನು ಯಾರಿಗೆ ಕೊಡಲಿ ಎಂದು ಕೇಳಿದಾಗ ಯಾರು ಸಿತಯಕ್ಷನನ್ನು ಸೋಲಿಸಿ ವಜ್ರವೇಗನನ್ನು ಕೊಂದು, ಅನಿವೇಗನನ್ನು ಹಾಗೆಯೆ ಮಾಡಲೊಪ್ಪಿ, ಕೊನೆಗೆ ಮಕ್ಕಳನ್ನು ಸನತ್ಕುಮಾರನಿಗೆ ಕೊಟ್ಟು ಮದುವೆ ಮಾಡುತ್ತಾನೆ. ಈ ನಿದರ್ಶನಗಳ ಜನಗಳಿಗೆ ಜ್ಯೋತಿಷ್ಯದಲ್ಲಿದ್ದ ನಂಬಿಕೆಯನ್ನು ತಿಳಿಸುತ್ತವೆ. ಇಂದಿನವರು ಯಾವುದೆ ಕೆಲಸ ಮಾಡಬೇಕಾದರೆ ಜ್ಯೋತಿಷ್ಯರನ್ನು ಕೇಳಿಯೇ ತಮ್ಮ ಕೆಲಸವನ್ನು ಮಾಡುತ್ತಾರೆ. ಹಿಂದಿನವರು ಹಾಕಿಕೊಟ್ಟ ಮಾರ್ಗವೆಂದರೂ ತಪ್ಪಾಗಲಾರದು.

ಆಗಿನ ಕಾಲದಲ್ಲಿ ಧರ್ಮ ಜನಜೀವನದ ಒಂದು ಪ್ರಮುಖ ಹಾಗೂ ಅನಿವಾರ್ಯ ಅಂಗವಾಗಿತ್ತು. ಅದು ಧರ್ಮಪ್ರಧಾನವೆಂದು ನಂಬಿದ್ದ ಸಮಾಜ. ಸಾಮಾಜಿಕರಲ್ಲಿ ಪ್ರತಿಯೊಬ್ಬರು ಒಂದಲ್ಲ ಒಂದು ಧರ್ಮವನ್ನು ಆಶ್ರಯದಲ್ಲಿ ಬಾಳನ್ನು ಸಾಗಿಸುತ್ತಿದ್ದರು. ಅದು ಅವರ ಜೀವನದ ಉಸಿರಾಗಿತ್ತು ಅದಕ್ಕಾಗಿ ಎಂತಹ ತ್ಯಾಗವನ್ನು ಬೇಕಿದ್ದರು ಮಾಡಲು ಜನ ಸಿದ್ಧರಾಗಿದ್ದರು.

ತೀರ್ಥಂಕರರ ಸಮವಸರಣ ಮಂಟಪ ತಮ್ಮೂರಿನ ಬಳಿ ಇಳಿದರೆ, ಮಹರ್ಷಿಗಳ ಊರ ಹೊರಗಿನ ಉದ್ಯಾನವನದಲ್ಲಿ ಬಂದು ಬೀಡುಬಿಟ್ಟಿದರೆ ಅಲ್ಲಿನ ದೊರೆಗಳಿಗೆ ಮತ್ತು ಪ್ರಜೆಗಳಿಗೆ ಆಗುತ್ತಿದ್ದ ಸಂತೋಷ ಅಪಾರ. ಅವರೆಲ್ಲರಿಗೂ ಅಲ್ಲಿಗೆ ಹೋಗುವುದೆಂದರೆ. ತುಂಬಾ ಸಡಗರ. ಎಲ್ಲರೂ ಆನಂದಭರಿತರಾಗಿ ಅಲ್ಲಿಗೆ ಹೋಗಿ ಪೂಜಿಸಿ ವಂದಿಸಿ ಧರ್ಮೋಪದೇಶ ಕೇಳಿಬರುತ್ತಿದ್ದರು. ಅಷ್ಟೇ ಅಲ್ಲ ಊರಿನ ಯಾವುದೋ ಒಂದು ಭಾಗದಲ್ಲಿ ಉದ್ಯಾನವನದಲ್ಲೋ ಗಿರಿಶಿಖರದ ಮೇಲೊ ತೀರ್ಥಂಕರ ಪರಮ ದೇವರ ಸಮವಸರಣ ಮಂಟಪ ಇಳಿಯಿತೆಂದರೆ ಆ ವಿಚಾರವನ್ನು ರಾಜನಿಗೆ ತಿಳಿಸುವುದಕ್ಕೆ ಒಬ್ಬ ಅಧಿಕಾರಿಯೇ ಇರುತ್ತಿದ್ದನು. ಅವನನ್ನು ‘ಋಷಿನಿವೇದಕ’ ಎಂದು ಕರೆಯುತ್ತಿದ್ದರು. ಇದು ಆಗಿನ ಕಾಲದ ಜನರಿಗೆ ಧರ್ಮದಲ್ಲಿ, ಧರ್ಮ ಗುರುಗಳಲ್ಲಿ ಇದ್ದ ಭಕ್ತಿಯನ್ನು ತಿಳಿಸುತ್ತದೆ.

ಜೈನ ಸಂನ್ಯಾಸಿಗಳಿಗೆ ಬಹಳ ಗೌರವವಿತ್ತು. ಸಮಾಜದಲ್ಲಿ ಎಲ್ಲ ವರ್ಗದ ಜನರ ಗೌರವಕ್ಕೆ ಅವರು ಪಾತ್ರರಾಗಿದ್ದವರು.ಜೈನ ಋಷಿಗಳು ಚರಿಗೆಗೆ ಬಂದರೆ ಅವರನ್ನು ಶ್ರಾವಕರು ಭಕ್ತಿಯಿಂದ ನಿಲ್ಲಿಸಿಕೊಂಡು ಉಣಬಡಿಸುತ್ತಿದ್ದರು. ಹೀಗೆ ಮಾಡುವುದು ಸಮಾಜದಲ್ಲಿ ಒಂದು ಸರ್ವಸಾಧಾರಣ ನಡುವಳಿಕೆ. ಋಷಿಗಳು ಮನೆಗೆ ಬಂದರೆ ಅವರನ್ನು ಉಟೋಪಚಾರಗಳಿಂದ ತೃಪ್ತಿಪಡಿಸಿ, ಆರ್ಶಿರ್ವಾದಗೊಂಡು ಸುಖಿಗಳಾಗುವ ಪುಣ್ಯ ತಮ್ಮ ಪಾಲಿಗೆ ಬಂದಿತಲ್ಲ ಎಂದು ಜನ ಹಿಗ್ಗುತ್ತಿದ್ದರು.

ದೊರೆಗಳು ನ್ಯಾಯನಿಷ್ಠರೂ ಸತ್ಯಸಂಧರೂ ಧರ್ಮಪರರೂ ಆಗಿದ್ದರು. ಇಲ್ಲಿನ ಬಹುಮಟ್ಟಿನ ರಾಜರಲ್ಲಿ ಉತ್ತಮ ದೊರೆಗಳಲ್ಲಿ ಕಾಣುವ ಆದರ್ಶಗುಣಗಳು ಕಂಢುಬರುತ್ತವೆ. ರಾಜರು ಪ್ರಜಾಪ್ರೇಮಿಗಳು ಪ್ರಜೆಗಳ ಕಷ್ಟಕ್ಕೆ ಮರಗುತ್ತಾರೆ. ಅಂಥ ಸನ್ನಿವೇಶಗಳು ಸುಕುಮಾರಸ್ವಾಮಿಯ ಕಥೆಯಲ್ಲಿ, ಗುರುದತ್ತಭಟಾರರ ಕಥೆಗಳಲ್ಲಿ ದೊರೆ ಪ್ರಜೆಗಳ ತೊಂದರೆ ನಿವಾರಣೆಗೆ ತಾನೇ ಹೋದರೆ, ಚಿಲಾತಪುತ್ರನ ಕಥೆಯಲ್ಲಿ ಆ ಕಾರ್ಯಕ್ಕೆ ತನ್ನ ಸೈನ್ಯವನ್ನು ಕಳಿಸಿಕೊಡುತ್ತಾನೆ, ರಾಜರಲ್ಲಿ ಕೆಲವರು ಬೇಜವಾಭ್ದಾರಿಯವರು, ಅಸಮರ್ಥರು, ಮಹಾಕಾಮಿಗಳು, ಚಂಚಲ ಚಿತ್ತರೂ, ಇದ್ದರೂ. ಒಟ್ಟಿನಲ್ಲಿ ವಡ್ಡಾರಾಧನೆಯ ಕಥೆಗಳಲ್ಲಿ ದೊರೆಗಳದೇ ಒಂದು ಪ್ರತ್ಯೇಕ ಪ್ರಪಂಚ. ಇಲ್ಲಿ ಅವರಿಗೆ ಸಾಕಷ್ಟು ಪ್ರಾಮುಖ್ಯತೆಯಿದೆ. ಎಲ್ಲ ಕಥೆಗಳಲ್ಲಿ ರಾಜಮಹಾರಾಜರ ಕಥೆಗಳು ಬರಯತ್ತವೆ. ಅನೇಕ ರಾಜರು ಜಿನಭಕ್ತರಾಗಿ ನಡೆದು ಕೊಂಡಿದ್ದಾರೆ ಈ ಕಥೆಗಳಿಂದ ತಿಳಿಯುತ್ತದೆ.

ಕನ್ನಡ ಹಿಂದಿನಿಂದಲೂ ಎಂತಹ ಶ್ರೇಷ್ಠವಾದ ಅಭಿವ್ಯಕ್ತಿ ಸ್ವಾತಂತ್ರವನ್ನು ಪಡೆದಿದ್ದಿತೆಂಬುದಕ್ಕೆ ಈ ಕಥೆ ಸಾಕ್ಷಿಯಾಗಿದೆ. ಇದರ ಅಧ್ಯಯನದಿಂದ ಜನಜೀವನದ ಚಿತ್ರ, ಸಂಸ್ಕೃತಿ, ಧರ್ಮ ನಮಗೆ ಅರಿವಾಗುತ್ತದೆ. ಇದರ ಜೊತೆಗೆ ದೇಶಿಯ ಶಬ್ದಗಳ ಪರಿಚಯವೂ ಆಗುತ್ತದೆ. ಹೀಗೆ ವಡ್ಡಾರಾಧನೆಯಲ್ಲಿ ವೈವಿಧ್ಯಮಯವಾದ ಜನಜೀವನದ ಚಿತ್ರಣ ಕಾಣುತ್ತೇವೆ.

**ಸಾಹಾಯಕ ಗ್ರಂಥಗಳು**

1. ಡಾ. ಡಿ. ಎಲ್. ನರಸಿಂಹಚಾರ್ ಸಂ. ವಡ್ಡಾರಾಧನೆ
2. ವಿ.ಸೀತಾರಾಮಯ್ಯ ಸಂ. ವಡ್ಡಾರಾಧನೆ. ಸಪ್ನ ಬುಕ್ ಹೌಸ್, ಬೆಂಗಳೂರು 2012
3. ಡಾ. ವ್ಹಿ. ಎಲ್. ಪಾಟೀಲ– ವಡ್ಡಾರಾಧನೆ ಜಾನಪದೀಯ ಅಧ್ಯಯನ, ಕೀರ್ತಿ ಪ್ರಕಾಶನ ಧಾರವಾಡ–2009
4. ಖಡಬಡಿ ಬಿ. ಕೆ., ವಡ್ಡಾರಾಧನೆ ಸಂಶೋಧನಾತ್ಮಕ ಅಧ್ಯಯನ, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ–1997
5. ಹಂಪ ನಾಗರಾಜಯ್ಯ ಸಂ– ವಡ್ಡಾಖುಆದನೆ(ಭಾಜಿಷ್ಣು ವಿರಚಿತ) ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ–1968
6. ಟಿ.ಕೇಶವ ಭಟ್ಟ ಶಿವಕೋಟ್ಯಾಚಾರ್ಯನ ವಡ್ಡಾರಾಧನೆ ಗದ್ಯಾನುವಾದ, ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು–2015